**ಕರ್ನಾಟಕ ಸರ್ಕಾರ**
**ಉನ್ನತ ಶಿಕ್ಷಣ ಇಲಾಖೆ**

ಸಂಖ್ಯೆ:ಕಾಶಿಇ/ಶೈವಿ/119/ಸು.ಮಾ/2022-23

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ಶೇಷಾದ್ರಿ ರಸ್ತೆ,
ದಿನಾಂಕ: 03.12.2022

## <u>ಸುತ್ತೋಲೆ</u>

<u>**ವಿಷಯ:**</u> ಎಲ್ಲ ಪದವಿ ಕಾಲೇಜುಗಳಲ್ಲಿ '**ಸುಶಾಸನ ಮಾಸ**'**ದ** ಅಂಗವಾಗಿ ವಿವಿಧ ಚಟುವಟಿಕೆಗಳನ್ನು ಆಯೋಜಿಸುವ ಕುರಿತು.

*****

ಸುಶಾಸನ ಅಥವಾ ಉತ್ತಮ ಆಡಳಿತ (Good Governance) ರಾಷ್ಟ್ರದ ಮತ್ತು ರಾಜ್ಯದ ಪ್ರಗತಿ, ಸುಸ್ಥಿರತೆ ಹಾಗೂ ಸಮೃದ್ಧಿಗೆ ಅತ್ಯಗತ್ಯವಾಗಿರುತ್ತದೆ. ಡಿಸೆಂಬರ್ 25 ನೇ ದಿನಾಂಕವನ್ನು ಸರ್ಕಾರ **'ಸುಶಾಸನ ದಿವಸ'** ಎಂದು ಘೋಷಿಸಿ ಪ್ರತಿ ವರ್ಷ ಆಚರಿಸುತ್ತಿದೆ. ಈ ವರ್ಷ ಉನ್ನತ ಶಿಕ್ಷಣ ಇಲಾಖೆ ಡಿಸೆಂಬರ್ ತಿಂಗಳನ್ನು ಸುಶಾಸನ ಮಾಸವಾಗಿ ಯುವಜನತೆಯಲ್ಲಿ ಅರಿವು ಮತ್ತು ಸ್ಫೂರ್ತಿ ಮೂಡುವಂತೆ ಆಚರಿಸುವ ಸಲುವಾಗಿ ವಿವಿಧ ಸ್ಪರ್ಧೆಗಳನ್ನು ಕಾಲೇಜು ಹಂತ, ಜಿಲ್ಲಾ ಹಂತ ಹಾಗೂ ರಾಜ್ಯದ ಹಂತಗಳಲ್ಲಿ ಆಯೋಜಿಸಲು ಉದ್ದೇಶಿಸಿದೆ.

ಈ ಹಿನ್ನೆಲೆಯಲ್ಲಿ, ಎಲ್ಲ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರು ಹಾಗೂ ಸಂಬಂಧಪಟ್ಟ ಪ್ರಾದೇಶಿಕ ಜಂಟಿ ನಿರ್ದೇಶಕರು ಕೋಷ್ಟಕದಲ್ಲಿ **ನಮೂದಿಸಿರುವ ವೇಳಾಪಟ್ಟಿಗೆ ಅನುಸಾರವಾಗಿ** ನಿರ್ವಹಿಸಬೇಕಾದ ಕರ್ತವ್ಯಗಳು ಈ ಕೆಳಗಿನಂತಿವೆ:

- ಎಲ್ಲ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಆಯೋಜಿಸಬೇಕಾದ ವಿವಿಧ ಸ್ಪರ್ಧೆಗಳ ಪಟ್ಟಿಯನ್ನು ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದ್ದು, ಈ ಎಲ್ಲ ಸ್ಪರ್ಧೆಗಳನ್ನು ಪ್ರಾಂಶುಪಾಲರು ತಮ್ಮ ಕಾಲೇಜುಗಳ ಹಂತದಲ್ಲಿ ನಡೆಸಿ, ಪ್ರಥಮ, ದ್ವಿತೀಯ ಮತ್ತು ತೃತೀಯ ಬಹುಮಾನ ವಿಜೇತರ ಹೆಸರನ್ನು ಕಾಲೇಜಿನಲ್ಲಿ ಘೋಷಿಸತಕ್ಕದ್ದು. ನಂತರ ಪ್ರಥಮ ಬಹುಮಾನ ವಿಜೇತರ ಹೆಸರನ್ನು ಮಾತ್ರ ತಮ್ಮ ದೃಢೀಕರಣದೊಂದಿಗೆ ಸಂಬಂಧಪಟ್ಟ ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿಗೆ ನಿಗದಿತ ದಿನಾಂಕದ ಒಳಗೆ ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

- ಪ್ರಾದೇಶಿಕ ಜಂಟಿ ನಿರ್ದೇಶಕರು ಆಯಾ ಜಿಲ್ಲೆಯ ಲೀಡ್ ಕಾಲೇಜುಗಳ ಪ್ರಾಂಶುಪಾಲರ ಸಹಕಾರದೊಂದಿಗೆ ಕಾಲೇಜುಗಳ ಹಂತದ ಪ್ರಥಮ ಬಹುಮಾನ ವಿಜೇತರ ನಡುವೆ ಜಿಲ್ಲಾ ಮಟ್ಟದಲ್ಲಿ ಈ ಸ್ಪರ್ಧೆಗಳನ್ನು ನಡೆಸಿ, ಪ್ರಥಮ, ದ್ವಿತೀಯ ಮತ್ತು ತೃತೀಯ ಬಹುಮಾನ ವಿಜೇತರ ಹೆಸರನ್ನು ಜಿಲ್ಲಾಮಟ್ಟದಲ್ಲಿ ಘೋಷಿಸತಕ್ಕದ್ದು. ಆದರೆ ಪ್ರಥಮ ಬಹುಮಾನ ವಿಜೇತರ ಹೆಸರುಗಳ ಪಟ್ಟಿಯನ್ನು ಮಾತ್ರ ಸಿದ್ಧಪಡಿಸಿ ರಾಜ್ಯಮಟ್ಟದ ಸ್ಪರ್ಧೆಗೆ ಪರಿಗಣಿಸುವುದು.
- ಪ್ರತಿಯೊಬ್ಬ ಪ್ರಾದೇಶಿಕ ಜಂಟಿ ನಿರ್ದೇಶಕರು ಇತರ ಪ್ರಾದೇಶಿಕ ಜಂಟಿ ನಿರ್ದೇಶಕರ ಸಹಭಾಗಿತ್ವದಲ್ಲಿ, ಜಿಲ್ಲಾ ಮಟ್ಟದ ವಿವಿಧ ಸ್ಪರ್ಧೆಗಳಲ್ಲಿ ಪ್ರಥಮ ಬಹುಮಾನವನ್ನು ಗಳಿಸಿದ ವಿದ್ಯಾರ್ಥಿಗಳ ನಡುವೆ ರಾಜ್ಯಮಟ್ಟದ ಸ್ಪರ್ಧೆಗಳನ್ನು ಆಯೋಜಿಸಿ, ಪ್ರಥಮ, ದ್ವಿತೀಯ ಮತ್ತು ತೃತೀಯ ಬಹಮಾನಗಳ ವಿಜೇತರ ಪಟ್ಟಿಯನ್ನು ಸಿದ್ಧಪಡಿಸಿ, ತಮ್ಮ ದೃಢೀಕರಣದೊಂದಿಗೆ ಕೇಂದ್ರ ಕಛೇರಿಗೆ ಇಮೇಲ್ ವಿಳಾಸ: dce.academic@gmail.com ಗೆ ದಿನಾಂಕ:21-12-2022 ರಂದು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

**ಸುಶಾಸನ ದಿವಸದ ಅಂಗವಾಗಿ ನಡೆಸಬೇಕಾದ ಸ್ಪರ್ಧೆಗಳ ಪಟ್ಟಿ:**

1. ಪ್ರಬಂಧ ಸ್ಪರ್ಧೆ
2. ಭಾಷಣ ಸ್ಪರ್ಧೆ
3. ಪೋಸ್ಟರ್ ಸ್ಪರ್ಧೆ

**ವಿವಿಧ ಸ್ಪರ್ಧೆಗಳಿಗೆ ವಿಷಯಗಳು :**

(ಸೂಚಿತ ವಿಷಯಗಳಲ್ಲಿ ಯಾವುದಾದರೂ ಒಂದು ವಿಷಯವನ್ನು ವಿದ್ಯಾರ್ಥಿಗಳು ಆಯ್ಕೆ ಮಾಡಿಕೊಂಡು ಕನ್ನಡ ಅಥವಾ ಇಂಗ್ಲಿಷ್ ಮಾಧ್ಯಮದಲ್ಲಿ ಸ್ಪರ್ಧೆಗಳಲ್ಲಿ ಭಾಗವಹಿಸಬಹುದಾಗಿರುತ್ತದೆ)

**ಅ. ಪ್ರಬಂಧ ಸ್ಪರ್ಧೆ_(Essay Competition)**

1) **ಶೈಕ್ಷಣಿಕ ಸುಶಾಸನದಲ್ಲಿ ಅಧ್ಯಾಪಕರ ಪಾತ್ರ** (Good Governance)
   Role of Teachers in Good Educational Governance
2) **ಸುಶಾಸನದಲ್ಲಿ ತಂತ್ರಜ್ಞಾನದ ಪಾತ್ರ**
   Role of Technology in Good Governance
3) **ಶೈಕ್ಷಣಿಕ ಸುಶಾಸನದಲ್ಲಿ ವಿದ್ಯಾರ್ಥಿಗಳ ಪಾತ್ರ**
   Role of students in Good Educational Governance

4) ಯುವಜನತೆ, ಆಧುನಿಕ ಯುಗದ ನಿರೀಕ್ಷೆಗಳು ಮತ್ತು ರಾಷ್ಟ್ರೀಯ ಶಿಕ್ಷಣ ನೀತಿ-2020
   Youth, Expectations of Modern Times and National Education Policy-2020
5) ರಾಷ್ಟ್ರೀಯ ಶಿಕ್ಷಣ ನೀತಿ-2020 ಮತ್ತು ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನ
   National Education Policy-2020 and Personality Development of students

**ಆ. ಭಾಷಣ ಸ್ಪರ್ಧೆ_(Elocution Compitition)**

1) ಸುಶಾಸನವನ್ನು ನೆಲೆಗೊಳಿಸುವಲ್ಲಿ ಸಾರ್ವಜನಿಕರ ಪಾತ್ರ
   Role of public in establishing Good Governance
2) ಭ್ರಷ್ಟಾಚಾರಮುಕ್ತ ಸಾರ್ವಜನಿಕ ಸೇವೆಗಳು: ಸುಶಾಸನದ ಹೆಗ್ಗುರುತು
   Corruption-free Public Services: Hallmark of Good Governance
3) ಶೈಕ್ಷಣಿಕ ಸುಶಾಸನದಲ್ಲಿ ಅಪೇಕ್ಷಣೀಯ ಅಂಶಗಳು
   Desirable factors in Good Educational Governance
4) ರಾಷ್ಟ್ರೀಯ ಶಿಕ್ಷಣ ನೀತಿ-2020 ರ ಬೆಳಕಿನಲ್ಲಿ ಉತ್ತಮ ಶೈಕ್ಷಣಿಕ ಪರಿಸರದ ನಿರ್ಮಾಣಕ್ಕೆ ನಾಯಕತ್ವದ ಕೊಡುಗೆ
   Contribution of Leadership towards creating good educational ecosystem in the light of National Education Policy-2020
5) ಸಮಾಜಮುಖಿ ಕಾಳಜಿಯನ್ನು ಯುವಜನರಲ್ಲಿ ಮೂಡಿಸುವ ನಿಟ್ಟಿನಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ-2020ರ ಪಾತ್ರ
   Role of National Education Policy-2020 in kindling societal concern among youth.

**ಇ. ಪೋಸ್ಟರ್ (Poster):**

1) ಸುಶಾಸನದ ವಿವಿಧ ಆಯಾಮಗಳು
   Various dimensions of Good Governance
2) ಸುಶಾಸನದಲ್ಲಿ ಮಹಿಳೆಯರ ಪಾತ್ರ
   Role of women in Good Governance
3) ರಾಷ್ಟ್ರೀಯ ಶಿಕ್ಷಣ ನೀತಿ-2020ರನ್ವಯ ಉನ್ನತ ಶಿಕ್ಷಣದ ಪುನರ್ವಿನ್ಯಾಸ
   Reconfiguration of Higher Education according to National Education Policy-2020

..4

**ಸ್ಪರ್ಧೆಗಳ ವೇಳಾಪಟ್ಟಿ:**

| ಕ್ರ. ಸಂ | ಸ್ಪರ್ಧೆಗಳು | ಕಾಲೇಜು ಹಂತ | ಜಿಲ್ಲಾಮಟ್ಟದ ಸ್ಪರ್ಧೆಗಳು | ರಾಜ್ಯ ಹಂತ | ಕಾಶಿಇಗೆ ಫಲಿತಾಂಶ ಸಲ್ಲಿಸಲು ಕೊನೆಯ ದಿನಾಂಕ |
|---|---|---|---|---|---|
| 1 | ಪ್ರಬಂಧ | 05-12-2022 ರಿಂದ 08-12-2022 | 10-12-2022 ರಿಂದ 13-12-2022 | 15-12-2022 ರಿಂದ 19-12-2022 | 21-12-2022 |
| 2 | ಭಾಷಣ | | | | |
| 3 | ಪೋಸ್ಟರ್ | | | | |

ವಿವಿಧ ಜಿಲ್ಲಾಮಟ್ಟ ಮತ್ತು ರಾಜ್ಯಮಟ್ಟದ ಸ್ಪರ್ಧೆಗಳ ದಿನಾಂಕ ಮತ್ತು ಸ್ಥಳಗಳ ಅಂತಿಮ ವಿವರವನ್ನು ಎಲ್ಲ ಪ್ರಾದೇಶಿಕ ಜಂಟಿ ನಿರ್ದೇಶಕರು ಅಂತಿಮಗೊಳಿಸಿ, ವಿವರಗಳನ್ನು ಕೇಂದ್ರ ಕಛೇರಿಗೆ ದಿನಾಂಕ: 07-12-2022 ರೊಳಗೆ ಸಲ್ಲಿಸುವುದು. ಜೊತೆಗೆ, ರಾಜ್ಯಮಟ್ಟದ ಸ್ಪರ್ಧೆಗಳ ಪ್ರಭಾರವನ್ನು ಕೆಳಗಿನ ಕೋಷ್ಟಕದಲ್ಲಿ ನಮೂದಿಸಿರುವಂತೆ ನಿರ್ವಹಿಸುವುದು.

**ರಾಜ್ಯಮಟ್ಟದ ಸ್ಪರ್ಧೆಗಳ ಆಯೋಜನೆ:**

| ಕ್ರ.ಸಂ | ರಾಜ್ಯಮಟ್ಟದ ಸ್ಪರ್ಧೆಗಳು | ಸ್ಪರ್ಧೆಗಳ ಮೇಲ್ವಿಚಾರಣೆ |
|---|---|---|
| 1 | ಪ್ರಬಂಧ | ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿ, ಮಂಗಳೂರು |
| 2 | ಭಾಷಣ | ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿ, ಧಾರವಾಡ |
| 3 | ಪೋಸ್ಟರ್ | ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿ, ಶಿವಮೊಗ್ಗ |

ಈ ಸ್ಪರ್ಧೆಗಳಿಗೆ ತಗುಲುವ ಖರ್ಚುವೆಚ್ಚವನ್ನು ಪ್ರಾಂಶುಪಾಲರು ತಮ್ಮ ಕಾಲೇಜಿನ ಸಾಂಸ್ಕೃತಿಕ ನಿಧಿಯಿಂದ ಭರಿಸತಕ್ಕದ್ದು.

ಎಲ್ಲಾ ಕಾಲೇಜಿನ ಪ್ರಾಂಶುಪಾಲರುಗಳು ಸದರಿ ವಿಷಯವನ್ನು **ಅತಿಜರೂರು** ಎಂದು ಪರಿಗಣಿಸಿ ನಿಗದಿತ ವೇಳಾಪಟ್ಟಿಗೆ ಅನುಗುಣವಾಗಿ ಸಂಬಂಧಪಟ್ಟ ಪ್ರಾದೇಶಿಕ ಜಂಟಿ ನಿರ್ದೇಶಕರು ಮತ್ತು ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರು ಅಗತ್ಯ ಕ್ರಮಗಳನ್ನು ಕೂಡಲೇ ತೆಗೆದುಕೊಳ್ಳುವಂತೆ ಸೂಚಿಸಲಾಗಿದೆ.

**(ಟಿಪ್ಪಣಿ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)**

**ಕಾಲೇಜು ಶಿಕ್ಷಣ ನಿರ್ದೇಶಕರು**

**ಇವರಿಗೆ:**

1. ಪ್ರಾದೇಶಿಕ ಜಂಟಿ ನಿರ್ದೇಶಕರು, ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಧಾರವಾಡ, ಗುಲ್ಬರ್ಗಾ, ಕಾಲೇಜು ಶಿಕ್ಷಣ ಇಲಾಖೆ - ಸೂಕ್ತ ಕ್ರಮಕ್ಕಾಗಿ
2. ಪ್ರಾಂಶುಪಾಲರು, ಎಲ್ಲ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು-- ಸೂಕ್ತ ಕ್ರಮಕ್ಕಾಗಿ
3. ಮಾಹಿತಿ ತಂತ್ರಜ್ಞಾನಾಧಿಕಾರಿಗಳು, ಕಾಲೇಜು ಶಿಕ್ಷಣ ಇಲಾಖೆಯ ಕೇಂದ್ರ ಕಛೇರಿ, ಬೆಂಗಳೂರು – ಇಲಾಖೆಯ ವೆಬ್ ಸೈಟಿನಲ್ಲಿ ಪ್ರಕಟಿಸುವುದಕ್ಕಾಗಿ
4. ಕಛೇರಿ ಪ್ರತಿ.